ಇಲಾಖೆ / ವಿಷಯ: DEPARTMENT / SUBJECT: ರಾಷ್ಟ್ರಪತಿ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 02/08/2019

# ತ್ರಿವಳಿ ತಲಾಕ್ ನಿಷೇಧ ವಿಧೇಯಕಕ್ಕೆ ಅಂಕಿತ

**ಹೊಸದಿಲ್ಲಿ:** ಸಂಸತ್ತಿನಲ್ಲಿ ಅಂಗೀಕಾರಗೊಂಡ ತ್ರಿವಳಿ ತಲಾಕ್ ನಿಷೇಧ ವಿಧೇಯಕಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಂಕಿತ ದೊರೆತಿದ್ದು, ಮುಸ್ಲಿಂ ಮಹಿಳೆಯರ (ವೈವಾಹಿಕ ಹಕ್ಕು ರಕ್ಷಣೆ) ಕಾನೂನು ಅಸ್ತಿತ್ವಕ್ಕೆ ಬಂದಿದೆ.

ಗಂಡಸರ ಪಕ್ಷಪಾತಿ ಎನಿಸಿದ್ದ ಏಕಪಕ್ಷೀಯ ತಲಾಕ್ ಘೋಷಣೆ ಪದ್ಧತಿ ರದ್ದುಗೊಂಡಿರುವ ಬಗ್ಗೆ ಮುಸ್ಲಿಂ ಮಹಿಳೆಯರಲ್ಲಿ ಅಪಾರ ಹರ್ಷ ವ್ಯಕ್ತವಾಗಿದೆ. ನೊಂದ ಮುಸ್ಲಿಂ ಮಹಿಳೆಯ ಪರ ನಿಲ್ಲುವ ಈ ಕಾನೂನಿನ ಪ್ರಬಲ ನಾಲ್ಕು ಸಂಗತಿಗಳು ಇಲ್ಲಿವೆ.



**1.** ಆರೋಪಿಗೆ ಜಾಮೀನು ನೀಡುವ ಮೊದಲು ನೊಂದ ಮಹಿಳೆಯ ಅಭಿಪ್ರಾಯ ಪಡೆಯಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಅಭಿಪ್ರಾಯ ಮಂಡಿಸುವ ಹಕ್ಕನ್ನು ಸಂತ್ರಸ್ತೆಗೆ ನೀಡಲಾಗಿದೆ.

**2.** ವಿಚಾರಣೆ ಹಂತದಲ್ಲಿ ಒಂದೊಮ್ಮೆ ಗಂಡನ ಬಗ್ಗೆ ಕನಿಕರ ಮೂಡಿದರೆ, ಪ್ರಕರಣ ಬರ್ಖಾಸ್ತುಗೊಳಿಸುವ ಹಕ್ಕು ಮಹಿಳೆಗೆ ಇದೆ.

**3.** ಮಕ್ಕಳ ಸುಪರ್ದಿ ವಿಷಯದಲ್ಲಿಯೂ ಮುಸ್ಲಿಂ ಮಹಿಳೆಗೆ ಪ್ರಬಲ ಹಕ್ಕುಗಳಿವೆ. ಪತಿ, ಜೀವನಾಂಶ ಒದಗಿಸಬೇಕಾಗುತ್ತದೆ.

**4.** ಮಹಿಳೆ ವಾಸವಾಗಿರುವ ಪ್ರದೇಶಕ್ಕೆ ಸಮೀಪದ ಕೋರ್ಟ್‌ನಲ್ಲಿಯೇ ವಿಚಾರಣೆಗೆ ಅವಕಾಶ ಮಾಡಿಕೊಡಬೇಕು ಎನ್ನುವ ನಿಯಮ ಇದರಲ್ಲಿದೆ.